ಪರಸ್ಪರರಿಗೆ ಒಪ್ಪಿಸಿಕೊಳ್ಳುವ ಕ್ರಿಯೆಯ ಮಾಧುರ್ಯ ಇಷ್ಟು ಅನನ್ಯ ಅಂತ ಗೊತ್ತಿರಲಿಲ್ಲ. ಇದಿದ್ದರೆ ನರಕದಲ್ಲಿರೋಕು ನಾನು ತಯಾರು. ನಿಂಗೆ ಥ್ಯಾಂಕ್ಸ್ ಕಣೆ' ಅಂದ ಮತ್ತಿನ ತನ್ಮಯತೆಯಲ್ಲಿ. ಅವಳು ನಿಧಾನವಾಗಿ ಮಂಚದಮೇಲೆ ಕುಳಿತುಕೊಂಡಿದ್ದಳು. 'ನಾನು ನಿಮಗೆ ಮಾಡಿದ್ದು ದೇಹದಾನ' ಅಂದಿದ್ದಳು ಗೋಡೆಯತ್ತ ನೋಡುತ್ತ. ಅರ್ಥವಾಗದ ಗಲಿಬಿಲಿಯಲ್ಲಿ, 'ಏ... ಹಾಸಿನಿ ಈ ಸಂದರ್ಭದಲ್ಲಿ ಇದೆಂತಹ ಹಾಸ್ಯ? ಅಪದ್ಧ ಅದು' ಎಂದ.



'ಒಲಿದು ಕೂಡುವವರಲ್ಲಿ ಮನಸು ದೇಹ ಎಲ್ಲ ಒಮ್ಮುಖವಾಗಿ ಚಲಿಸಿ ಎರಡು ಹನಿಗಳು ಸೇರಿ ಒಂದೇ ಹನಿಯಾಗುವಂಥ ಕ್ರಿಯೆ. ನಾನು ಸುಮಂತನ್ನ ಮೆಚ್ಚಿದ್ದೆ. ಮನಸಲ್ಲಿ ಮತ್ತೊಬ್ಬನಿದ್ದಾಗ ನಿಮಗೆ ಕೊಟ್ಟಿದ್ದು ದೇಹ ಮಾತ್ರ, ಅಂದರೆ ದಾನವಲ್ದೆ ಮತ್ತೇನು?' ಅವನ ಮನಸಲ್ಲಿ ದೇಹದಲ್ಲಿ ಏಕಮಯವಾಗಿ ಝೇಂಕರಿಸಿಕೊಂಡಿದ್ದ ಮಾಧುರ್ಯ ತಕ್ಷಣ ನಾಶವಾಗಿ ಹೋಗಿತ್ತು. ಹತಾಶೆ ಅವಮಾನ ತೀವ್ರ ತಿರಸ್ಕಾರಕ್ಕೊಳಗಾದ ಭಾವದಲ್ಲಿ ಜರ್ಜರಿತನಾಗಿಹೋದ. 'ಮತ್ತೆ... ನನ್ನ ಮದುವೆಯಾದದ್ದೇಕೆ? ಬೇಡ ಅನ್ನಬಹುದಿತ್ತಲ್ಲ?' ಕಹಿ ದನಿಯಲ್ಲಿ ಕೇಳಿದ.

'ನಾನೂ ಕೇಳಬಹುದು. ಮದುವೆಗೆ ಮೊದಲು ಒಂದು ಮಾತಾದರೂ ನನ್ನೊಂದಿಗೆ ಆಡಬೇಕು ಅನಿಸ್ಲಿಲ್ಲ ಯಾಕೆ ನಿಮಗೆ? ಪ್ರಸ್ತಾಪಕ್ಕೆ ತಕ್ಷಣ ಒಪ್ಪಿಕೊಳ್ಳೋದರಲ್ಲಿ ಹಣ ಆಸ್ತಿಯ ಆಕರ್ಷಣೆಯಿತ್ತಾ?' ಮೂಲಕ್ಕೆ ಬಿದ್ದ ಪೆಟ್ಟು ವಿಲವಿಲ ಅನ್ನುವಂತಹದು. ಅಂತರಾತ್ಮನಲ್ಲಿ ತಡಕಾಡಿದ. ಆಕ್ಷೇಪಣೆ ಪೂರ್ತಿ ನಿಜವಲ್ಲ.

'ಅಂತಸ್ತು ಸಿಕ್ಕಿದ್ದು ನಿಜ. ಆದರೆ, ಖಂಡಿತ ಆಗ ನನ್ನ ಕಲ್ಪನೆಯಲ್ಲೂ ಅದಿರಲಿಲ್ಲ. ನಿನ್ನ ಆಗಾಗ ನೋಡಿದ್ನಲ್ಲ, ಚಂದದ ಹುಡುಗಿ ಹೆಂಡತಿಯಾಗಿ ಸಿಗತಾಳೆ ಅನ್ನುವ ಆಕರ್ಷಣೆ ಹೌದು. ಮೇಲಿಂದ ನಿನ್ನ ತಂದೆಯಲ್ಲಿ ನಂಗೆ ಅಪಾರ ಗೌರವ. ಅವರು ಪ್ರಸ್ತಾಪ ಮಾಡಿದ್ದೆ ನನಗೊಂದು ವರದಂತಿತ್ತು.'

'ನನಗೂ ಹಾಗೇನೆ. ಅಪ್ಪನ ಸಿಟ್ಟಿಗೆಲ್ಲ ಹೆದರುವವಳಲ್ಲ. ಆದರೆ, ಅವರ ದೈನ್ಯಾವಸ್ಥೆ ಕಣ್ಣಲ್ಲಿ ನೀರ ಪಸೆಯನ್ನು ನಾನು ಸಹಿಸಲಾರೆ. ಒಪ್ಪಿಕೊಂಡೆ. ಆದರೆ, ನೀವು ಒಂದು ಮಾತು ನನ್ನ ಕೇಳುವುದು ಉಪಚಾರಕ್ಕಾದರೂ ಸರಿಯಿತ್ತು. ಬೇಡ ಅಂದುಬಿಟ್ಟರೆ ಅನ್ನೊ ಭಯವಿತ್ತೇನೋ ನಿಮಗೆ. ಹೋಗಲಿ ಬಿಡಿ, ತೀರಾ ಭಾವಜೀವಿಯೇನಲ್ಲ ನಾನು, ಸಮಯ ಕಳೆದಂತೆ ಸರಿ ಹೋಗಬಹುದು. ಇದ್ದುದನ್ನ ಇದ್ದಂತೆ ಹೇಳೋಕು ಅದೇ ಕಾರಣವಿರಬಹುದು.'

ಹತ್ತು ದಿನಗಳ ಟೂರು. ಮುಗಿದರೆ ಸಾಕು ಅನಿಸತೊಡಗಿತು ಅವನಿಗೆ. ಮಾರನೆ ನಸುಕಿನಲ್ಲಿ ಟೈಗರ್ ಹಿಲ್ಲಿನಲ್ಲಿ ಕುಳಿತವರ ಕಣ್ಣೆದುರು ಕತ್ತಲೆಯಲ್ಲಿ ಇದ್ದಕ್ಕಿದ್ದಂತೆ ಬಂಗಾರಬಣ್ಣದಲ್ಲಿ ಮೂಡುವ ಕಾಂಚನಜುಂಗಾ ಶಿಖರದ ದೈವೀದೃಶ್ಯಕ್ಕೂ ಅವನು ಜಡವಾಗೇ